# ಮಾನವಪ್ರೇಮವೆ ನಿಜವಾದ ದೈವಭಕ್ತಿ

ಕೋ.ಚೆನ್ನಬಸಪ್ಪ

*ವಿರಾಟ್‌ಸ್ವರೂಪಿ ಭಗವಂತನನ್ನು ಪ್ರೀತಿಸದೆ ಕೇವಲ ಜಡ ವಸ್ತುಗಳನ್ನು ಪೂಜಿಸುವುದು ನಿಜವಾದ ಭಕ್ತಿಯಲ್ಲ ಎಂಬುದನ್ನು ಪ್ರತಿಪಾದಿಸುತ್ತಾರೆ ಕನ್ನಡದ ಪ್ರಖ್ಯಾತ ಲೇಖಕರಾದ ಶ್ರೀ ಕೋ. ಚೆನ್ನಬಸಪ್ಪನವರು.*

ಈ ವರ್ಷದ ಆದಿಯಲ್ಲಿ ಮೈಸೂರಿನಲ್ಲೊಂದು ದೊಡ್ಡ ಸುದ್ದಿ. ಹಿತ್ತಲಿನಲ್ಲಿ ಬೆಳೆದ ಪಪಾಯಿ ಗಿಡದಲ್ಲೊಂದು ಹಣ್ಣು ಬಿಟ್ಟಿತ್ತು. ಅದನ್ನು ಹೆಚ್ಚಿದಾಗ ಒಂದು ಹೋಳಿನಲ್ಲಿ 'ನಾಗರ ಹೆಡೆ'ಯ ಆಕಾರ, ಇನ್ನೊಂದು ಹೋಳಿನಲ್ಲಿ 'ಶಂಖಾಕಾರ' ಕಾಣಿಸಿ ತಂತೆ. ಹಣ್ಣುಕೊಯ್ದು ಆ ಮಹಿಳೆ ಪಕ್ಕದ ಮನೆಯವರಿಗೆ ತೋರಿಸಿದರು. ಅರ್ಧಘಂಟೆಯಲ್ಲಿ ಸುದ್ದಿ ಬಡಾವಣೆಯಲ್ಲೆಲ್ಲ ಹಬ್ಬಿತು. ಓ! ಜನ ಈ ಪವಾಡ ನೋಡಲು ಗುಂಪು ಗುಂಪಾಗಿ ಬಂದರು. ಹೋಳಾದ ಹಣ್ಣಿಗೆ ಅರಿಸಿನ ಕುಂಕುಮ ಹಚ್ಚಿದರು. ಆರತಿ ಬೆಳಗಿದರು. ಕೈಮುಗಿದು 'ಭಕ್ತಿ' ಮಾಡಿದರು! ಗಲ್ಲ ಗಲ್ಲ ಬಡಿದುಕೊಂಡರು. ಇದಾದ ವಾರ ಒಪ್ಪತ್ತಿನಲ್ಲಿ ಇನ್ನೊಂದು ಸುದ್ದಿ ಪತ್ರಿಕೆಗಳ ಮುಖಪುಟದಲ್ಲಿ ಚಿತ್ರಸಹಿತ ಪ್ರಕಟವಾಯಿತು. ಶಿಡ್ಲಘಟ್ಟ ತಾಲ್ಲೂಕು ದೇವರ ಮಳ್ಳೂರಿನ ಮಳ್ಳೂರಾಂಬ ದೇವಾಲಯದ ಬಳಿಯಿರುವ ಆಲದ ಮರದಲ್ಲಿ ಮೈವೆತ್ತಿರುವ ಗಣೇಶನ ಆಕೃತಿ. ತಗೋ, ಅಲ್ಲಿಯೂ ಜನಜಾತ್ರೆ! ಅರಿಸಿನ ಕುಂಕುಮಾರ್ಚನೆ! ತೆಂಗಿನಕಾಯಿ ಒಡೆದು ಕರ್ಪೂರದಾರತಿ ಬೆಳಗಿ 'ಭಕ್ತಿ' ಸಮರ್ಪಣೆ ಮಾಡಿದರು!

ಈ ಗದ್ದಲದ ಸುದ್ದಿಯನ್ನು ಓದಿ 'ಭಕ್ತಿ' ಎಂದರೇನೆಂಬ ಬಗ್ಗೆ ಜಿಜ್ಞಾಸೆ ಉಂಟಾಯಿತು. ಪಪಾಯಿ ಹಣ್ಣಿನ ಒಳಗಿರುವ ತಿರುಳಿನ ಆಕೃತಿಗೆ, ಅರಳಿ ಮರದ ಬುಡದಲ್ಲಿ 'ಒಡಮೂಡಿದ' ಆಕೃತಿಗೆ ಪೂಜೆ ಎಂದರೇನು? ಅದು ದೇವರ ಪ್ರತಿಮೆಯೆ? ಒಟ್ಟು ದೇವರೆಂದರೇನು ಎಂಬ ಬಗೆಗೆ ಜಿಜ್ಞಾಸೆ ಉಂಟಾಯಿತು.

ಭಕ್ತಿ ಎಂದರೆ ಏನೆಂಬುದನ್ನು ಸ್ವಲ್ಪ ಯೋಚಿಸೋಣ. ಭಕ್ತಿ ಎಂದರೆ ಅತೀವ 'ಪ್ರೇಮ' ; 'ಉತ್ಕಟ ವಾತ್ಸಲ್ಯ' ಎಂಬುದಾಗಿ ನಾರದರ ಭಕ್ತಿಸೂತ್ರದಲ್ಲಿ ವಿವರಿಸಲಾಗಿದೆ. ಭಕ್ತರಲ್ಲೆಲ್ಲ ಸರ್ವಶ್ರೇಷ್ಠ ಭಕ್ತಾಗ್ರಣಿ ಎಂದು ಕರೆಯಲಾದ ಪ್ರಹ್ಲಾದನು : "ಅವಿವೇಕಿಗಳು ವಿಷಯವಸ್ತುಗಳಲ್ಲಿ ಎಂಥ ಪ್ರೀತಿಯನ್ನಿಟ್ಟಿರುತ್ತಾರೊ, ಅಂಥ ಪ್ರೀತಿಯು ನಿನ್ನನ್ನು ಧ್ಯಾನಿಸುವಾಗ ನನ್ನ ಮನಸ್ಸಿನಿಂದ ಜಾರದಿರಲಿ" ಎಂದು ಪ್ರಾರ್ಥಿಸುತ್ತಾನೆ. ಇದರ ಒಟ್ಟರ್ಥ 'ಭಕ್ತಿ' ಎಂದರೆ ಅತೀವ ಪ್ರೇಮ, ಉತ್ಕಟ ವಾತ್ಸಲ್ಯ. ಈ ಪ್ರೇಮ (ಭಕ್ತಿ) ವಿವಿಧ ಬಗೆಯಾಗಿರಬಹುದು. ಯಶೋದೆಯು ಕೃಷ್ಣನನ್ನು ಪ್ರೀತಿಸಿದಂತೆ ಮಾತೃ ವಾತ್ಸಲ್ಯವಾಗಿರಬಹುದು, ಗೋಪಿಕಾಸ್ತ್ರೀಯರು ಅವನನ್ನು ಪ್ರೀತಿಸಿದಂತೆ ಮಧುರ ಭಾವವಾಗಿರಬಹುದು. ಅರ್ಜುನನ ಸ್ನೇಹಭಾವವಾಗಿರಬಹುದು. ಆಂಜನೇಯನ ದಾಸ್ಯಭಾವ ಆಗಿರಬಹುದು. ಹಿರಣ್ಯಕಶಿಪು ಪ್ರಹ್ಲಾದನನ್ನು ಕುರಿತು "ಗುರುಕುಲದಲ್ಲಿ ಏನೇನು ಕಲಿತೆ?" ಎಂದು ಕೇಳಿದಾಗ, ಪ್ರಹ್ಲಾದ: "ನಾರಾಯಣನಲ್ಲಿ ಒಂಬತ್ತು ಬಗೆಯ ಭಕ್ತಿಯನ್ನು ಹೊಂದಿ ಅವನನ್ನು ತಿಳಿದುಕೊ ಎಂದು ಕಲಿಸಿದರು" ಎಂದು ಉತ್ತರಿಸಿದ. ಶ್ರವಣ, ಕೀರ್ತನ, ಸ್ಮರಣ, ಪಾದಸೇವೆ, ಅರ್ಚನೆ, ವಂದನೆ, ದಾಸ್ಯ, ಸಖ್ಯ, ಆತ್ಮನಿವೇದನೆ ಎಂಬ ಒಂಬತ್ತು ಬಗೆಯ ಭಕ್ತಿರೂಪಗಳನ್ನು ಒಪ್ಪಿಸುತ್ತಾನೆ. ನಾರದನ ಭಕ್ತಿಸೂತ್ರ ಮತ್ತು ಪ್ರಹ್ಲಾದನ ನವವಿಧ ಭಕ್ತಿನಿರೂಪಣೆಯೇ ನಿಜವಾದ ಭಕ್ತಿ ಎಂದಾದರೆ ಮೈಸೂರಿನ ಜನ, ಮಳ್ಳೂರಿನ ಜನ ಆ ಪಪಾಯಿ ಮರದ ಬುಡಕ್ಕೆ ತಲೆಹಚ್ಚಿ ನಮಸ್ಕರಿಸಿದ್ದು ಭಕ್ತಿಯೇ? ಅವರು ಆ ಆಕಾರಗಳನ್ನು ಪ್ರೀತಿಸುವುದಕ್ಕೆ ಅಲ್ಲಿ ಏನಿತ್ತು? ಪ್ರೀತಿಸಬೇಕಾದರೆ ಪ್ರಿಯವಾದ ವಸ್ತುವಾಗಿರಬೇಕು. ಲೋಕಕ್ಕೆಲ್ಲ ಸುಪರಿಚಿತವಾದ ದಾಂಪತ್ಯಪ್ರೇಮ ಸತಿಪತಿಯರಲ್ಲಿ —ಸಜೀವ ವ್ಯಕ್ತಿಗಳಲ್ಲಿ—ಮಾತ್ರ ಸಾಧ್ಯ. ಸ್ತ್ರೀಪುರುಷ ವಿಗ್ರಹಗಳನ್ನು ಸತಿಪತಿಯರು ಆಲಿಂಗಿಸಿ ಪ್ರೀತಿ ಮಾಡಲಾರರು. ಭಕ್ತ-ಭಗವಂತರ ಪ್ರೇಮ ಸಂಬಂಧವನ್ನು ಶರಣಸತಿ-ಲಿಂಗಪತಿ ಎಂದು ಶರಣರು ವರ್ಣಿಸಿದ್ದಾರೆ.

ಹಾಗಾದರೆ ಈಗ ಜನ ಬೀದಿಬೀದಿಗಳಲ್ಲಿ ಗಣಪತಿ, ಆಂಜನೇಯ, ಅಣ್ಣಮ್ಮ, ಅಯ್ಯಪ್ಪ, ಅಪ್ಪಯ್ಯ, ಮಾರಿ, ಮಸಣಿ ..... ಇತ್ಯಾದಿ ಇತ್ಯಾದಿ... ಅಸಂಖ್ಯಾತ ವಿಗ್ರಹಗಳನ್ನು ಸ್ಥಾಪಿಸಿ, ಬೀದಿಯಲ್ಲಿ ಹಾದು ಹೋಗುವವರು ಅತ್ತ ತಿರುಗಿ ಗಲ್ಲ ಬಡಿದುಕೊಂಡು 'ಭಕ್ತಿ' ಮಾಡುತ್ತಾರಲ್ಲ—ಅವರು ಆ ವಿಗ್ರಹಗಳನ್ನು ನಿಜವಾಗಿ ಪ್ರೀತಿಸುವಂಥಾದ್ದು ಅವುಗಳಲ್ಲಿ ಏನಿದೆ? ವಿಗ್ರಹಗಳಿಗೆ ವಜ್ರ ಕಿರೀಟ, ಬಂಗಾರದ ಕವಚ, ಬೆಳ್ಳಿಯ ಪಾದುಕೆಗಳನ್ನು ಹೊದಿಸಿ ಕಣ್ಣು ಕುಕ್ಕುವ ಅಲಂಕಾರವನ್ನು ನೋಡಿ ಪ್ರೇಮ ಉಕ್ಕಿ ಬರುವುದೆ? ಈ ವಜ್ರ ವೈಢೂರ್ಯಗಳ ಆಭರಣದ ಅಲಂಕಾರವನ್ನು ಕಂಡ ಭಕ್ತರಿಗೆ ಪ್ರೇಮಭಕ್ತಿ ಉದ್ದೀಪನೆ ಆಗುವುದಕ್ಕಿಂತ ಆಶ್ಚರ್ಯದಿಂದ ಬೆರಗಾಗಬಹುದು. ನಾರದ, ಪ್ರಹ್ಲಾದ, ಆಳ್ವಾರರು ಹೇಳಿದ ಅನುಭವಿಸಿದ ಭಕ್ತಿ (ಪ್ರೇಮ) ಹೇಗೆ ಉಂಟಾಗುವುದು? ಈ ಮಾತನ್ನು ನಾವು ನಮ್ಮ ನಮ್ಮ ಅನುಭವದ ಒರೆಗಲ್ಲಿಗೆ ಹಚ್ಚಿ ಪರೀಕ್ಷಿಸಬಹುದು.

ಈ ಹಿನ್ನೆಲೆಯಲ್ಲಿ ದೇವರು, ದೈವ ಎಂದರೇನು ಎಂಬುದನ್ನು ಕುರಿತು ಚಿಂತನೆ ಮಾಡಬೇಕು. ಗಣಪತಿಯ ಸ್ತುತಿ ಮಾಡುವಾಗ,

ಅಜಂ ನಿರ್ವಿಕಲ್ಪಂ ನಿರಾಕಾರಮೇಕಂ
ನಿರಾನಂದಮಾನಂದಮದ್ವೈತಪೂರ್ಣಮ್ ।

**ಪರಂ ನಿರ್ಗುಣಂ ನಿರ್ವಿಶೇಷಂ ನಿರೀಹಂ**
**ಪರಬ್ರಹ್ಮರೂಪಂ ಗಣೇಶಂ ಭಜೇಮ ॥**

ಎನ್ನುತ್ತೇವೆ. ರಾಮನನ್ನು ಕುರಿತು ಸ್ತೋತ್ರ ಮಾಡುವಾಗ : **ಶುದ್ಧಬ್ರಹ್ಮ ಪರಾತ್ಪರ ರಾಮ** ಎನ್ನುತ್ತೇವೆ. ಅಕ್ಕಮಹಾದೇವಿ ಚೆನ್ನ ಮಲ್ಲಿಕಾರ್ಜುನನನ್ನು ಸ್ತುತಿಸುವಾಗ: "ಸಾವಿಲ್ಲದ ಕೇಡಿಲ್ಲದ ಚೆಲುವಂಗಾನೊಲಿದೆನವ್ವ" ಎನ್ನುತ್ತಾಳೆ. ಹಾಗಾದರೆ ಆ ಹುಟ್ಟು ಇಲ್ಲದ, ಸಾವು ಇಲ್ಲದ, ಗುಣಗಳಿಲ್ಲದ, ನಾಮರೂಪಗಳಿಲ್ಲದ, ಶುದ್ಧ ಬ್ರಹ್ಮ ಪರಾತ್ಪರನೆ, 'ಮರದೊಳಗೆ ಮಂದಾಗ್ನಿಯ ಉರಿಯ ದಂತೆ ಇರಿಸಿದಂತೆ', ಹಾಲಿನಲ್ಲಿ ತುಪ್ಪವನ್ನು ಕರಗದಂತೆ ಇರಿಸಿ, ನರನೊಳಗೆ ಮರೆಯಾಗಿದ್ದು, **ಸೃಷ್ಟಿಸ್ಥಿತಿವಿನಾಶಾನಾಂ ಶಕ್ತಿಭೂತೇ ಸನಾತನಿ**ಯಾಗಿ ಇದ್ದಾನೆ(ಳೆ)ಯೇ?

ಹಾಗಾದರೆ ಈಗಲೂ ಒಂದು ಸಂಶಯ ಸುಳಿಯುತ್ತದೆ. "ಸಾವಿಲ್ಲದ, ರೂಹಿಲ್ಲದ, ಚೆಲುವಂಗೆ ನಾನೊಲಿದೆನವ್ವ" ಎಂಬುದು ಎಷ್ಟು ಸಮಂಜಸ? ರೂಹಿಲ್ಲದಿದ್ದರೆ ಚೆಲುವು ಹೇಗಿದ್ದೀತು? ಅಂಥವನನ್ನು ಪ್ರೀತಿಸುವ, ಅವನನ್ನು ಒಲಿಯುವ ಮಾತೆಲ್ಲಿ ಬಂತು? ಇದಕ್ಕೆ ಉತ್ತರವನ್ನು ಭಗವದ್ಗೀತೆಯಲ್ಲಿ ಕೃಷ್ಣ ಪರಮಾತ್ಮ 'ವಿಭೂತಿಯೋಗ' ಮತ್ತು 'ವಿಶ್ವರೂಪದರ್ಶನ ಯೋಗ' ದಲ್ಲಿ (ಅಧ್ಯಾಯ ೧೦ ಮತ್ತು ೧೧) ಅಸೂಯೆಯಿಲ್ಲದ ಪ್ರಿಯಭಕ್ತನಾದ ಅರ್ಜುನನಿಗೆ ಕೊಟ್ಟಿದ್ದಾನೆ. "ಅಜನೂ ಅನಾದಿಯೂ ಲೋಕಮಹೇಶ್ವರನೂ ಆದ ನನ್ನನ್ನು ಯಥಾರ್ಥ ವಾಗಿ ಜ್ಞಾನಿಗಳು ತಿಳಿಯುತ್ತಾರೆ" ಎಂದು ಪ್ರಾರಂಭಿಸಿ, "ನನ್ನ ಧ್ಯಾನದಲ್ಲಿಯೆ ಮಗ್ನನಾಗಿರುವ ಮತ್ತು ಪ್ರೀತಿಪೂರ್ವಕವಾಗಿ ಭಜಿ ಸುವ ಭಕ್ತರಿಗೆ ಜ್ಞಾನರೂಪೀ ಯೋಗವನ್ನು ಕೊಡುತ್ತೇನೆ" ಎನ್ನು ತ್ತಾನೆ ಭಗವಂತ. ಆಗ ಅರ್ಜುನ ಹೇಳುತ್ತಾನೆ : "ನೀನೆ ನಿನ್ನ ವಿಭೂತಿಗಳನ್ನು ನಿಶ್ಶೇಷವಾಗಿ ಹೇಳಲು ಸಮರ್ಥನು. ಆ ನಿನ್ನ ವಿಭೂತಿಗಳ ಮೂಲಕ ಎಲ್ಲ ಲೋಕಗಳನ್ನೂ ವ್ಯಾಪಿಸಿರುವೆ.... ನಿನ್ನ ವಿಭೂತಿಗಳನ್ನು ಸವಿಸ್ತಾರವಾಗಿ ಪುನಃ ಹೇಳು." ಈ ಪ್ರಶ್ನೆಗೆ ಉತ್ತರವಾಗಿ ಕೃಷ್ಣ ಪರಮಾತ್ಮ: "ನನ್ನ ವ್ಯಾಪ್ತಿಗೆ ಅಂತ್ಯವೇ ಇಲ್ಲ. ಆದ್ದರಿಂದ ಅದರಲ್ಲಿ ಪ್ರಮುಖವಾದ ವಿಭೂತಿಗಳನ್ನು ಹೇಳು ತ್ತೇನೆ" ಎಂದು ನಿರೂಪಿಸಿ ೨೦ನೆ ಶ್ಲೋಕದಿಂದ ೪೦ನೆ ಶ್ಲೋಕ ದವರೆಗೆ ತನ್ನ ವಿವಿಧ ವಿಭೂತಿಗಳನ್ನು ವಿಸ್ತರಿಸಿ ಕೊನೆಯಲ್ಲಿ : "ಅವುಗಳನ್ನೆಲ್ಲ ಹೇಳಿ ಮುಗಿಸುವುದು ಅಸಾಧ್ಯ—ಆದ್ದರಿಂದ ಒಟ್ಟಿನ ಮೇಲೆ ಯಾವ ಯಾವ ವಸ್ತುಗಳು ಸಂಪದ್ಯುಕ್ತವೊ, ಕಾಂತಿಯುಕ್ತವೊ, ಶಕ್ತಿಸಹಿತವೊ ಅಲ್ಲೆಲ್ಲ ನನ್ನ ತೇಜಸ್ಸೇ ಇದೆ ಎಂದು ತಿಳಿ" ಎನ್ನುತ್ತಾನೆ. ಅಂದರೆ ಅಜನೂ ಅವ್ಯಯನೂ, ನಿರಾ ಕಾರನೂ ಆಗಿದ್ದ ಆ ಪರಬ್ರಹ್ಮ ಈ ವಿಶ್ವಬ್ರಹ್ಮಾಂಡ ರೂಪದಲ್ಲಿ ಪ್ರತ್ಯಕ್ಷ ಕಣ್ಣಿಗೆ ಕಾಣುವಂಥ ರೂಪಧಾರಣೆ ಮಾಡಿದೆ! ವಿಗ್ರಹ ಗಳಲ್ಲಿ ಮಾತ್ರ ನಾನು ಇದ್ದೇನೆ ಎಂದು ಎಲ್ಲೂ ಹೇಳಿಲ್ಲ.

ಹಾಗಾದರೆ ಆ ಅವ್ಯಕ್ತ ಪರಬ್ರಹ್ಮವಸ್ತುವು ನಾವು ಪ್ರೀತಿಸ ಬಹುದಾದ ಯಾವ ರೂಪನ್ನು ಧರಿಸಿದೆ? ಅದಕ್ಕೆ ಉತ್ತರವನ್ನು ಶ್ರೀರಾಮಕೃಷ್ಣ ಪರಮಹಂಸರು ನರೇಂದ್ರನಿಗೆ ಹೇಳಿದ ಒಂದು ಮಾತಿನಿಂದ ಗ್ರಹಿಸಬಹುದು. ನರೇಂದ್ರ ಆ ನಿರಾಕಾರ ಪರಬ್ರಹ್ಮ ದರ್ಶನಕ್ಕಾಗಿ ತನಗೆ ನಿರ್ವಿಕಲ್ಪ ಸಮಾಧಿಸ್ಥಿತಿಯನ್ನು ಕರುಣಿಸ ಬೇಕೆಂದು ಕಾಡಿದಾಗ ಗುರುದೇವರು, "ಮರಳಿ ಮರಳಿ ಅದೇ ಕತೆ ಹೇಳಲು ನಿನಗೆ ನಾಚಿಕೆಯಾಗದೆ?..... ಸಾವಿರಾರು ಜನರಿಗೆ ಶಾಂತಿಛಾಯೆಯನ್ನು ನೀನು ನೀಡಬೇಕಾಗಿದೆ. ಅದನ್ನು ಬಿಟ್ಟು ನಿನ್ನ ಸ್ವಂತ ಮುಕ್ತಿಗಾಗಿ ಬಾಯಿ ಬಾಯಿ ಬಿಟ್ಟು ಕಾತರನಾಗಿರುವೆ ಯಲ್ಲ. ಎಂಥ ಕ್ಷುದ್ರ ಆದರ್ಶ ನಿನ್ನದು" ಎಂದು ಭರ್ತ್ಸನೆ ಮಾಡು ತ್ತಾರೆ. ಆದರೂ ಶಿಷ್ಯನಿಗೆ ಅದರ ರುಚಿ ತೋರಿಸಿ, ಆ ಸ್ಥಿತಿಯಿಂದ ಮರಳಿ ಬಂದ ನರೇಂದ್ರನಿಗೆ ಹೇಳುತ್ತಾರೆ: "ಇನ್ನು ಅದಕ್ಕೆ ಬೀಗ ಹಾಗಿದ್ದೇನೆ. ನೀನು ಮಾಡಬೇಕಾದ ಕೆಲಸವೆಲ್ಲವನ್ನೂ ಮುಗಿಸಿದ ಮೇಲೆ ಬೀಗ ತೆಗೆಯುತ್ತೇನೆ." ಗುರುಮಹಾರಾಜರು ಮತ್ತು ಸ್ವಾಮೀಜಿಯ ಈ ಪ್ರಸಂಗದಿಂದ ತಿಳಿಯುವ ಸತ್ಯ—ಪರಬ್ರಹ್ಮವನ್ನು ವ್ಯಕ್ತ ಜೀವರಾಶಿಗಳಲ್ಲಿ ಪ್ರೇಮದ(ಭಕ್ತಿ) ಸೇವಾಭಾವನೆಯಿಂದ ಪೂಜಿಸು. ಅಂದರೆ "ಎಲ್ಲೆಲ್ಲಿಯೂ ನೀನು ಕಾಣುವ ಈ ಜಂಗಮರೂಪೀ ಜಗತ್ತಿನ ಜೀವಕೋಟಿಯನ್ನು ಪ್ರೀತಿಸು, ಅದೇ ದೈವಭಕ್ತಿ."

ಗುರುಮಹಾರಾಜರ ಈ ಉಪದೇಶವನ್ನು ಸ್ವಾಮೀಜಿ ಅಕ್ಷರಶಃ ಪಾಲಿಸಿದರು. ಅವರ ಮಾತುಗಳಲ್ಲೆ ಅವರ ಭಕ್ತಿಯ ಸ್ವರೂಪವನ್ನು ನೋಡೋಣ, ಕೇಳೋಣ:

"ಪೂಜಿಸಬೇಕಾದ ಏಕಮಾತ್ರ ದೇವರೆಂದರೆ ಮಾನವದೇಹ ದಲ್ಲಿರುವ ಮಾನವ ಆತ್ಮ. ಎಲ್ಲ ಪ್ರಾಣಿಗಳೂ ದೇವರ ದೇವಾ ಲಯ ಎಂಬುದೇನೊ ಸರಿ. ಆದರೆ ಮಾನವನು ದೇವಾಲಯಗಳ ತಾಜಮಹಲ್. ನಾನು ದೇವರನ್ನು ಆ ದೇವಾಲಯದಲ್ಲಿ ಪೂಜಿಸ ದಿದ್ದರೆ, ಇನ್ನಾವ ದೇವಾಲಯದಿಂದ ಯಾವ ಪ್ರಯೋಜನವೂ ಇಲ್ಲ." (ಸಮಗ್ರ ಕೃತಿಶ್ರೇಣಿ: ಸಂ.೨, ಪು.೩೨೧)

"ಬಹು ತಪಸ್ಸು ಮಾಡಿ ನಾನು ಇದೇ ಸತ್ಯ ಎಂಬುದನ್ನು ಅರ್ಥ ಮಾಡಿಕೊಂಡಿದ್ದೇನೆ—ದೇವರು ಪ್ರತಿ ಜೀವದಲ್ಲೂ ಇದ್ದಾನೆ; ಇದನ್ನು ಬಿಟ್ಟರೆ ಬೇರೆ ದೇವರು ಇಲ್ಲ. ಯಾರು ಜೀವನ ಸೇವೆ ಮಾಡುತ್ತಾನೆಯೋ ಅವನು ನಿಜವಾಗಿಯೂ ದೇವರ ಸೇವೆಯನ್ನೇ ಮಾಡುತ್ತಾನೆ." (ಕೃತಿಶ್ರೇಣಿ ೮.೨೪೨)

"ಯಾರು ದರಿದ್ರರಲ್ಲಿ, ದೀನರಲ್ಲಿ, ರೋಗಿಗಳಲ್ಲಿ ಶಿವನನ್ನು ಕಾಣುವರೊ ಅವರೆ ನಿಜವಾಗಿ ಶಿವನನ್ನು ಪೂಜಿಸುವರು. ಯಾರು ಶಿವನನ್ನು ವಿಗ್ರಹದಲ್ಲಿ ಮಾತ್ರ ಕಾಣುವರೊ ಅವನ ಪೂಜೆ ಕೇವಲ ಪ್ರಾಥಮಿಕ" (ಕೃತಿಶ್ರೇಣಿ, ಸಂ.೩, ಪು. ೧೪೧-೧೪೨). "ಯಾರು ಇತರರಿಗಾಗಿ ಜೀವಿಸುವರೊ ಅವರೇ ನಿಜವಾಗಿ ಜೀವಿಸಿದಂತೆ. ಉಳಿದವರು ಜೀವಿಸಿರುವುದಕ್ಕಿಂತ ಹೆಚ್ಚು ಸತ್ತಿದ್ದಾರೆ" (ಕೃತಿಶ್ರೇಣಿ, ಸಂ. ೪,ಪು. ೩೬೭). "ಯಾರ ಹೃದಯ ದರಿದ್ರರಿಗಾಗಿ ಮರುಗು ವುದೊ (ರಕ್ತ ಸುರಿಸುವುದೊ) ಅಂಥವರನ್ನು ನಾನು ಮಹಾತ್ಮ

ಎಂದು ಕರೆಯುತ್ತೇನೆ. ಉಳಿದವರೆಲ್ಲ ದುರಾತ್ಮರು" (ಕೃತಿಶ್ರೇಣಿ, ಸಂ.೫, ಪು.೫೮). "ನನ್ನ ದೇವರು ಪಾಪಿಗಳು. ನನ್ನ ದೇವರು ದುಃಖಿಗಳು. ಎಲ್ಲ ಜನಾಂಗಗಳ, ಎಲ್ಲ ಜಾತಿಯ ದರಿದ್ರರೆ ನನ್ನ ದೇವರು. ಅವರೇ ನನ್ನ ವಿಶೇಷ ಪೂಜಾಮೂರ್ತಿಗಳು" (ಕೃತಿಶ್ರೇಣಿ, ಸಂ.೫, ಪು.೧೩೭).

ಈಗ ಯೋಚನಾಶಕ್ತಿಯುಳ್ಳ ಪ್ರಾಣಿ, ಮನಸ್ಸುಳ್ಳ ಮನುಷ್ಯ ದೇವರು ಎಲ್ಲಿದ್ದಾನೆ, ಅವನನ್ನು ಪೂಜಿಸುವುದು ಪ್ರಾರ್ಥಿಸುವುದು, ಭಕ್ತಿ ಮಾಡುವುದು ಎಂದರೆ ಏನು? ಹೇಗೆ? ಎಂಬುದನ್ನು ಅರಿಯಲಿ. ಸ್ವಾಮಿ ವಿವೇಕಾನಂದರು ಮೇಲೆ ಹೇಳಿದ ಆ ದೇವರನ್ನು ಪ್ರೀತಿಸುವುದೆ, ನಾರದರಭಕ್ತಿಸೂತ್ರದ ಪ್ರಹ್ಲಾದನ ನವವಿಧ ಭಕ್ತಿಯನ್ನು ಮಾಡಿದಂತೆ! ಅದನ್ನು ಬಿಟ್ಟು ಬೀದಿ ಬೀದಿಯ ನಿರ್ಜೀವ ಕಲ್ಲು, ಮಣ್ಣು, ಮರದ ವಿಗ್ರಹಗಳ ಮುಂದೆ ನಿಂತು ಗಲ್ಲ ಬಡಿದುಕೊಳ್ಳುವುದಲ್ಲ. ಪ್ರೇಮ, ಪ್ರೇಮ, ಪ್ರೇಮ—ಸಕಲ ಚರಾಚರ ವಿಶ್ವಬ್ರಹ್ಮಾಂಡದಲ್ಲಿ ಪ್ರೇಮ. ಸದ್ಯದ ವಿಶ್ವಬ್ರಹ್ಮಾಂಡದ ಮಕುಟಮಣಿಯಾದ ಮನುಷ್ಯನ ಪ್ರೇಮ, ಜಗತ್‌ಪ್ರೇಮ ನಿಜವಾದ ಭಕ್ತಿ! ಅಂಥ ಭಕ್ತಿ ಮಾಡಿ. ಮಾನವನನ್ನು ಪ್ರೀತಿಸದೆ, ಸಕಲ ಜೀವರಾಶಿಯನ್ನು ಪ್ರೀತಿಸದೆ ಕೇವಲ ಗುಡಿಯಲ್ಲಿನ ವಿಗ್ರಹವನ್ನು ಪೂಜಿಸುವುದು ಯಾವ ಪ್ರಯೋಜನಕ್ಕೂ ಬಾರದು. ಕೇವಲ ವಿಗ್ರಹವೆ ದೇವರಲ್ಲ. ಆ ವಿಗ್ರಹದ ಹಿಂದಿರುವ ಭಗವತತ್ತ್ವವನ್ನು ಪ್ರೀತಿಸದೆ ಕೇವಲ ವಿಗ್ರಹಾರಾಧನೆಯೂ ಒಂದು ಜಡವಾದವೆ (materialism). ❄

ಅನುಭಾವಿ ಬೌದ್ಧ ಸಂನ್ಯಾಸಿಯೊಬ್ಬನು ಪರಿವ್ರಾಜಕನಾಗಿ ಸುತ್ತುತ್ತಿರುವಾಗ ಒಮ್ಮೆ ಒಂದು ಆಶ್ರಮದಲ್ಲಿ ಆಶ್ರಯ ಪಡೆದನು. ರಾತ್ರಿ ಅಲ್ಲಿ ತಂಗಿರುವಾಗ ಚಳಿಯ ಬಾಧೆಯನ್ನು ಅವನಿಗೆ ತಡೆಯಲಾಗಲಿಲ್ಲ. ಹತ್ತಿರದಲ್ಲೇ ಒಂದು ಮರದಿಂದ ತಯಾರಿಸಿದ ಬುದ್ಧನ ವಿಗ್ರಹವಿತ್ತು. ಅವನು ಆ ವಿಗ್ರಹಕ್ಕೆ ಬೆಂಕಿ ಹೊತ್ತಿಸಿ ತನ್ನ ಚಳಿಯನ್ನು ಹೋಗಲಾಡಿಸಿಕೊಂಡನು.

ಬೆಂಕಿ ಉರಿಯುತ್ತಿರುವುದನ್ನು ಕಂಡು ಆಶ್ರಮದ ಬೇರೆ ಸಂನ್ಯಾಸಿಗಳು ಓಡಿಬಂದರು. ಆ ಅನುಭಾವಿಯು ಆರಾಮವಾಗಿ ಬೆಂಕಿ ಕಾಯಿಸಿಕೊಳ್ಳುತ್ತ ಕುಳಿತಿದ್ದನು. ಬುದ್ಧನ ವಿಗ್ರಹ ಉರಿಯುತ್ತಿರುವುದನ್ನು ನೋಡಿ ಆ ಸಂನ್ಯಾಸಿಗಳಿಗೆ ಕೋಪಾಶ್ಚರ್ಯಗಳೆರಡೂ ಒಮ್ಮೆಯೇ ಉಂಟಾದವು. "ಏ ಮೂರ್ಖ, ಎಂಥ ಕೆಲಸ ಮಾಡುತ್ತಿರುವೆ ನೀನು! ನೀನು ಬುದ್ಧನನ್ನು ಕೊಲ್ಲುತ್ತಿರುವೆಯಲ್ಲ!" ಎಂದು ಜೋರಾಗಿ ಅರಚಿಕೊಂಡರು.

ಅನುಭಾವಿಯು ಸ್ವಲ್ಪವೂ ವಿಚಲಿತನಾಗದೆ ಒಂದು ಕೋಲನ್ನು ತೆಗೆದುಕೊಂಡು ಕೆಂಡವನ್ನು ಕೆದಕತೊಡಗಿದನು. "ಏನು ಮಾಡುತ್ತಿರುವೆ?" ಎಂದು ಆ ಸಂನ್ಯಾಸಿಗಳು ಗುಡುಗಿದರು.

"ಏನಿಲ್ಲ, ನೀವು ಹೇಳಿದಿರಿ, ನಾನು ಬುದ್ಧನನ್ನು ಕೊಂದೆ ಎಂದು. ಅವನ ಎಲುಬುಗಳು ಸಿಗಬಹುದೊ ಎಂದು ನೋಡುತ್ತಿದ್ದೇನೆ!" ❄

# ದೇವರನ್ನು ನೋಡಿದ್ದೀರಾ?

ಎನ್. ಕೃಷ್ಣಸ್ವಾಮಿ

*ಸ್ವಾಮಿ ವಿವೇಕಾನಂದರ ತಾರುಣ್ಯದಲ್ಲಿ ಕಾಡುತ್ತಿದ್ದ ಒಂದು ಪ್ರಮುಖವಾದ ಪ್ರಶ್ನೆಯ ಕೆಲವು ಮಜಲುಗಳನ್ನು ಪರಿಚಯಿಸಿರುವ ಶ್ರೀಯುತ ಎನ್. ಕೃಷ್ಣಸ್ವಾಮಿಯವರು ಬೆಂಗಳೂರಿನ ವಿವೇಕಾನಂದ ಎಜುಕೇಷನ್ ಸೊಸೈಟಿಯ ಕಾರ್ಯದರ್ಶಿಗಳೂ ಹಾಗೂ ಆಶ್ರಮದ ನಿಕಟ ಭಕ್ತರೂ ಆಗಿದ್ದಾರೆ.*

## ನರೇಂದ್ರನ ಪ್ರಶ್ನೆ

ಯುವಕ ನರೇಂದ್ರ ತಾನು ಕಂಡ ಮಹಾತ್ಮರನ್ನೆಲ್ಲ ಒಂದು ಪ್ರಶ್ನೆ ಕೇಳುತ್ತಿದ್ದ. "ಮಹಾಶಯರೆ, ತಾವು ದೇವರನ್ನು ನೋಡಿದ್ದೀರಾ?" ಎಂಬ ಸರಳ ಪ್ರಶ್ನೆ ಅದು. ಆದರೆ ಈ ಪ್ರಶ್ನೆಗೆ ಸರಳವಾದ ಉತ್ತರ ಕೊಡುವವರು ಯಾರೂ ಅವನಿಗೆ ಸಿಗಲಿಲ್ಲ. ಕೊನೆಗೆ ದಕ್ಷಿಣೇಶ್ವರದಲ್ಲಿ ಶ್ರೀರಾಮಕೃಷ್ಣರನ್ನೂ ಇದೇ ಪ್ರಶ್ನೆ ಕೇಳಿದ. ಅವರು ಅನಿರೀಕ್ಷಿತವಾದ ಉತ್ತರ ಕೊಟ್ಟರು: "ಹೌದು ನೋಡಿದ್ದೇನೆ. ನಿನಗೂ ಬೇಕಾದರೆ ತೋರಿಸುತ್ತೇನೆ. ಆದರೆ ದೇವರು ಯಾರಿಗೆ ಬೇಕು? ಜನರು ಹೆಂಡತಿ ಮಕ್ಕಳಿಗಾಗಿ, ಹಣಕ್ಕಾಗಿ ಕೊಡಗಟ್ಟಲೆ ಕಣ್ಣೀರು ಸುರಿಸುತ್ತಾರೆ. ಆದರೆ ದೇವರಿಗಾಗಿ ಅಳುವವರು ಯಾರು? ವ್ಯಾಕುಲತೆಯಿಂದ ಅವನ ದರ್ಶನ ಬೇಕೆಂದು ಅಳುವವರಿಗೆ ದೇವರು ಕಾಣಿಸಿಕೊಳ್ಳುತ್ತಾನೆ."

## ವೇದಾಂತದ ಉತ್ತರ

ವೇದಾಂತದ ಪ್ರಕಾರ ದೇವರನ್ನು ನೀವು ಎಲ್ಲಿಯೂ ಹುಡುಕಿಕೊಂಡು ಹೋಗಬೇಕಾಗಿಲ್ಲ. ಅವನು ನಿಮ್ಮೊಳಗೇ ಇದ್ದಾನೆ. ವೇದಾಂತದಲ್ಲಿ ನಾಲ್ಕು ಮಹಾವಾಕ್ಯಗಳಿವೆ : ಅಹಂ ಬ್ರಹ್ಮಾಸ್ಮಿ—ಎಂದರೆ ನಾನೇ ಬ್ರಹ್ಮ, ತತ್ತ್ವಮಸಿ—ಎಂದರೆ ನೀನೇ ಬ್ರಹ್ಮ, ಅಯಮಾತ್ಮಾ ಬ್ರಹ್ಮ—ಈ ಆತ್ಮವೇ ಬ್ರಹ್ಮ ಮತ್ತು ಪ್ರಜ್ಞಾನಂ ಬ್ರಹ್ಮ—ಎಂದರೆ ಪ್ರಜ್ಞಾನವೇ ಬ್ರಹ್ಮ. ಸರಿಯಾದ ಅರಿವೇ ಬ್ರಹ್ಮ. ಪ್ರತಿಯೊಬ್ಬರಲ್ಲಿಯೂ ಇರುವ ಆತ್ಮನೇ ಬ್ರಹ್ಮ. ಇನ್ನೊಂದು ಮಹಾವಾಕ್ಯ ಇದೆ—ಸರ್ವಂ ಖಲ್ವಿದಂ ಬ್ರಹ್ಮ—ಈ ಜಗತ್ತು ಎಲ್ಲ ಬ್ರಹ್ಮ. ಸರಿಯಾದ ದೃಷ್ಟಿಯಿಂದ ನೋಡಿದರೆ ಎಲ್ಲೆಲ್ಲೂ ಬ್ರಹ್ಮ ಇರುತ್ತದೆ. ಬ್ರಹ್ಮ ಇಲ್ಲದಿರುವ ಸ್ಥಳವೇ ಇಲ್ಲ.